<u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

I ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) ಅವರು: ಮಾನ್ಯ ಉಪಾಧ್ಯಕ್ಷರೇ, 1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದಡಿ 8(3)ನೇ ಕಲುಮಿನ ಮೇರೆಗೆ:

1) 1994ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ: 25-7-96ರಂದು ಹೊರಡಿಸಲಾದ ಸಿಆಸುಇ 21 ಎನ್ ಆರ್‌ಡಿ 96ನೇ ಕ್ರಮಾಂಕದ ಅಧಿಸೂಚನೆ - 1;

2) 1994ನೇ ಸಾಲಿನ ಕರ್ನಾಟಕ ಲೋಕೋಪಯೋಗಿ (ನೀರಾವರಿ ಸೇವೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ: 25-7-96ರಂದು ಹೊರಡಿಸಲಾದ ಸಿಆಸುಇ 21 ಎಸ್ ಆರ್‌ಡಿ 96ನೇ ಕ್ರಮಾಂಕ ಅಧಿಸೂಚನೆ - 2;

3) ಮತೀಯ ವರ್ಷಗಳಲ್ಲಿ ಮೃತರಾದ ವ್ಯಕ್ತಿಗಳ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ವಿಶೇಷ ನಿಯಮಗಳ ಸಂಬಂಧದಲ್ಲಿ 1993ನೇ ಸಾಲಿನ ಕರ್ನಾಟಕ ನಾಗರೀಕ ಸೇವಾ ನಿಯಮಗಳ ತಿದ್ದುಪಡಿ ಬಗ್ಗೆ ದಿನಾಂಕ 28-1-94ರಂದು ಹೊರಡಿಸಲಾದ ಸಿಆಸು ಇ 44 ಎನ್‌ಸಿಎ 93ನೇ ಕ್ರಮಾಂಕದ ಅಧಿಸೂಚನೆ;

4) ಮತೀಯ ವರ್ಷಗಳಲ್ಲಿ ಮೃತರಾದ ವ್ಯಕ್ತಿಗಳ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ವಿಶೇಷ ನಿಯಮಗಳ ಸಂಬಂಧದಲ್ಲಿ 1995ನೇ ಸಾಲಿನ ಕರ್ನಾಟಕ ನಾಗರೀಕ ಸೇವಾ ನಿಯಮಗಳ ತಿದ್ದುಪಡಿ ಬಗ್ಗೆ ದಿನಾಂಕ 18-11-95ರಂದು ಹೊರಡಿಸಲಾದ ಸಿಆಸು ಇ 45 ಎನ್‌ಸಿಎ 94ನೇ ಕ್ರಮಾಂಕದ ಅಧಿಸೂಚನೆ;

5) 1994ನೇ ಸಾಲಿನ ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 14-6-94ರಂದು ಹೊರಡಿಸಲಾದ ಸಿಆಸುಇ 52 ಎನ್‌ಸಿಆರ್ 93ನೇ ಕ್ರಮಾಂಕದ ಅಧಿಸೂಚನೆ:

6) 1994ನೇ ಸಾಲಿನ ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 19-1-95ರಂದು ಹೊರಡಿಸಲಾದ ಸಿಆಸುಇ 57 ಎನ್‌ಸಿ ಆರ್ 94ನೇ ಕ್ರಮಾಂಕದ ಅಧಿಸೂಚನೆ:

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯವದ 22ನೇ ಕಲಮಿನ ಮೇರೆಗೆ:

7) ಬಳ್ಳಾರಿ ಜಿಲ್ಲೆಯ ದೋಣಿಮಲೈನ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೂರೇಷನ್ ಇವರಿಗೆ ತಮ್ಮ ಆಡಿಟೋರಿಯಂನಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಸಂಬಂಧದಲ್ಲಿ ದಿನಾಂಕ 27-7-96 ರಂದು ಹೊರಡಿಸಲಾದ ಹೆಚ್‌ಡಿ 37 ಸೆನೆ 96ನೇಕ್ರಮಾಂಕದ ಆದೇಶ:

8) ಮರಾಠ ಲೈಟ್ ಇನ್‌ಫೆಂಟ್ರಿ ರೆಜಿಮೆಂಟಲ್ ಕೇಂದ್ರ, ಬೆಳಗಾಂ, ಇವರು ತಮ್ಮ ಸಭಾಂಗಣದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 12-8-96ರಂದು ಹೊರಡಿಸಲಾದ ಹೆಚ್‌ಡಿ 21 ಸಿ ಎನ್ ಎನ್ 96ನೇ ಕ್ರಮಾಂಕದ ಆದೇಶ;

9) 1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 47(5) ನೇ ಕಲಮಿನ ಮೇರೆಗೆ 1993-94ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಮಾಣೀಕೃತ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

II ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಅವರು: ಮಾನ್ಯ ಉಪಾಧ್ಯಕ್ಷರೇ, 1993ರ ಕರ್ನಾಟಕ ಪಂಚಾಯತ್ ರಾಜ ಅಧಿನಿಯಮದ 262(3)ನೇ ಕಲಮಿನ ಮೇರೆಗೆ. 1993-94ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

III ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಮಂತ್ರಿ) ಅವರು: ಮಾನ್ಯ ಉಪಾಧ್ಯಕ್ಷರೇ, 1957ನೇ ಇಸವಿಯ ಕರ್ನಾಟಕ ಮುದ್ರಾಂಕ ಅಧಿನಿಯಮದ 9(2) ನೇ ಕಲಮಿನ ಮೇರೆಗೆ:- ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶ್ರೀ ವಸಂತರಾವ್ ಮೋಹಿತ್, ಕೃಷಿ ಅಭಿವೃದ್ಧಿ ಸಂಘ ನಿಪ್ಪಾಣಿ ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನಿಪ್ಪಾಣಿ ಶಾಖೆಯಿಂದ ಏತ ನೀರಾವರಿಗಾಗಿ ಸಾಲ ಪಡೆಯಲು ಬರೆದುಕೊಡುವ ಅಧಾರ ಪತ್ರಗಳಿಗೆ ತಗಲುವ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಕ್ಕೆ ವಿನಾಯಿತಿ ನೀಡಿರುವ ಸಂಭಂಧದಲ್ಲಿ ದಿನಾಂಕ 8-4-1996 ರಂದು ಹೊರಡಿಸಲಾದ ಕಂ. ಇ.6 ಮುನೋಮು 96ನೇ ಕ್ರಮಾಂಕದ ಆದೇಶವನ್ನು ಮಂಡಿಸುತ್ತೇನೆ.

IV ಶ್ರೀ ಎಂ. ಎಸ್. ಪಾಟೀಲ್ (ಜವಳಿ ಮಂತ್ರಿ) ಅವರು: ಮಾನ್ಯ ಉಪಾಧ್ಯಕ್ಷರೇ 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ; 1994-95ನೇ ಸಾಲಿನ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 20ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

V ಶ್ರೀ ಕೆ.ಬಿ. ಶಾಣಪ್ಪ (ಅಬಕಾರಿ ಮಂತ್ರಿ) ಅವರು : ಮಾನ್ಯ ಉಪಾಧ್ಯಕ್ಷರೇ 1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(4)ನೇ ಕಲುಮಿನ ಮೇರೆಗೆ;

1) 1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 22ನೇ ಕಲಮಿನ ಅಡಿಯಲ್ಲಿ ದಿನಾಂಕ 1-6-96ರಿಂದ ಜಾರಿಗೆ ಬರುವಂತೆ ಅಬಕಾರಿ ಕರದ ರಿಯಾಯಿತಿ ಸಂಬಂಧದಲ್ಲಿ ದಿನಾಂಕ 1-6-96 ರಂದು ಹೊರಡಿಸಲಾದ ಎಫ್ ಡಿ 5 ಪಿ ಇ ಎಸ್ 96(1)ನೇ ಕ್ರಮಾಂಕದ ಅಧಿಸೂಚನೆ;

2) 1968ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಕರ ಮತ್ತು ಶುಲ್ಕ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 24-7-96 ರಂದು ಹೊರಡಿಸಲಾದ ಎಫ್ ಡಿ 5 ಪಿ ಇ ಎಸ್ 96(2)ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VI ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮಿನಿಸ್ಟರ್ ಇನ್ ಚಾರ್ಜ್ ಆಫ್ ಹ್ಯಾಂಡ್ಲೂಮ್ಸ್ ಅಂಡ್ ಟೆಕ್ಸ್‌ಟೈಲ್ಸ್) ಅವರು: ಮಾನ್ಯ ಉಪಾಧ್ಯಕ್ಷರೇ 1956 ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ; 1995-96ನೇ ಸಾಲಿನ ಕರ್ನಾಟಕ ಮಿನಿಸ್ಟರ್ಸ್ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಎಲ್ಲಾ ಕಾಗದ ಪತ್ರಗಳೂ ಮಂಡಿಸಲ್ಪಟ್ಟಿವೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಸಚಿವರಾದ ಶ್ರೀ ಹೆಚ್.ಡಿ. ರೇವಣ್ಣನವರು ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ಪರಿಶೀಲಿಸಿದ್ದೇನೆ. ಈ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಹಕ್ಕುಚ್ಯುತಿ ಸಮಿತಿಗೆ ವಹಿಸುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದೇನೆ.

(ಸದನವು ರಾತ್ರಿ 9-10ಕ್ಕೆ ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲ್ಪಟ್ಟಿತು)

---

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - 560 001